ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 4 ನೇ ಪ್ರತಿವಾದಿ ಪರ ಶ್ರೀ ಜಿ ಆರ್ ಎಸ್ ವಕೀಲರಿಂದಃ-

ನಾನು ಮತ್ತು 1 ಮತ್ತು 3 ನೇ ವಾದಿಗಳು ಶಾಲೆ ಕಲಿತಿರುವುದಿಲ್ಲ. ನನಗೆ 1 ಮತ್ತು 3 ನೇ ವಾದಿಗಳು ಅಕ್ಕ ತಂಗಿಯಾಗಬೇಕು. 2 ನೇ ಪ್ರತಿವಾದಿ ನನ್ನ ಸಹೋದರ 9 ನೇ ತರಗತಿ ವರೆಗೆ ವ್ಯಾಸಂಗ ಮಾಡಿರುತ್ತಾರೆ. 1 ನೇ ಪ್ರತಿವಾದಿ ನನ್ನ ತಂದೆ ವರು ವ್ಯಾಸಂಗ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ.

ನನ್ನ ಮದುವೆಯು 1989 ರಲ್ಲಿ ಆಗಿರುತ್ತದೆ, ನನ್ನ ಸೀಬಕಟ್ಟೆ ಗೆ ಮದುವೆ ಮಾಡಿ ಕಳುಹಿಸಿಕೊಟ್ಟಿರುತ್ತಾರೆ. ಪ್ರಸ್ತುತ ನಾನು ರಾಮನಹಳ್ಳಿಯಲ್ಲಿ ವಾಸವಿರುತ್ತೇನೆ. ನನ್ನ ಅಕ್ಕ 1 ನೇ ವಾದಿಯ ಮದುವೆ 1984 ರಲ್ಲಿ ಆಗಿರುತ್ತದೆ. ಅವರನ್ನು ಕೈಲಾಂಚ ಅಣ್ಣಹಳ್ಳಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಅವರು ಸಹ ರಾಮನಹಳ್ಳಿಯಲ್ಲಿ ವಾಸವಿರುತ್ತಾರೆ. 3 ನೇ ವಾದಿಯ ಮದುವೆಯು 1993 ರಲ್ಲಿ ಆಗಿರುತ್ತದೆ, ಅವರನ್ನು ಮರಳವಾಡಿ ಗ್ರಾಮಕ್ಕೆ ಮದುವೆ ಮಾಡಿ ಕಳುಹಿಸಿಕೊಡಲಾಗಿರುತ್ತದೆ ಈಗಲೂ ಅವರು ಅಲ್ಲೇ ವಾಸವಿರುತ್ತಾರೆ. 2 ನೇ ಪ್ರತಿವಾದಿರವರ ಮದುವೆ 2002 ನಡೆದಿರುತ್ತದೆ. ನಾನು ಮದುವೆಯಾದ ಬಗ್ಗೆ ದಾಖಲೆ ಇರುತ್ತದೆ. ನನ್ನ ಅಕ್ಕ ತಂಗಿರವರ ಮದುವೆಯ ದಾಖಲೆಗಳು ಇರುತ್ತದೇ ಇಲ್ಲವೋ ಕೇಳಿ ತಿಳಿದುಕೊಳ್ಳಬೇಕು. ವಾದಿಯರ ಮತ್ತು 2 ನೇ ಪ್ರತಿವಾದಿಯ ಆಧಾರ್ ಕಾರ್ಡ್ ಇರುತ್ತದೆ, ಸದರಿ ಆಧಾರ್ ಕಾರ್ಡ್ ಗಳನ್ನು

ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಹಾಜರುಪಡಿಸಿದೇ ಇದ್ದರೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ದಾವೆಯನ್ನು ಒಂದು ಸ್ವತ್ತಿನ ಮೇಲೆ ಮಾಡಲಾಗಿರುತ್ತದೆ, 2 ಎಕರೆ 9 ಗುಂಟೆ ಜಮೀನಿನ ಮೇಲೆ ಮಾಡಲಾಗಿರುತ್ತದೆ. ದಾವಾ ಸರ್ವೇ ನಂಬರ್ ನನಗೆ ಗೊತ್ತಿರುವುದಿಲ್ಲ. ರಾಮನಹಳ್ಳಿ 18 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಒಂದು ಸ್ವತ್ತು ಇರುತ್ತದೆ, ಅದೇ ರೀತಿ ರಾಮನಹಳ್ಳಿ 7 ಗುಂಟೆ ಜಮೀನಿನಲ್ಲಿ ಒಂದು ಮನೆ ನಮ್ಮ ತಂದೆ ಮತ್ತು ತಮ್ಮನ ಹೆಸರಿನ್ಲಿ ಇರುತ್ತದೆ. ನಮ್ಮ ತಂದೆ ಮತ್ತು ತಮ್ಮರವರು ಆರ್ ಸಿ ಸಿ ಮನೆಯನ್ನು ಸುಮಾರು 8 ವರ್ಷಗಳ ಹಿಂದೆ ಕಟ್ಟಿಸಿಕೊಂಡಿರುತ್ತಾರೆ. ನಮ್ಮ ಮದುವೆಯ ಸಮಯದಲ್ಲಿ ನಾಟಿ ಹೆಂಚಿನ ಮನೆ ಇತ್ತು. ಸದರಿ 7 ಗುಂಟೆ ಜಮೀನಿನಲ್ಲಿ ಈಗ ಆರ್ ಸಿ ಸಿ 19 x 22 ಅಡಿ ಮನೆ ಮತ್ತು 15 x 19 ಶೀಟಿ ನ ಮನೆ ಇರುತ್ತದೆ. ಸದರಿ 7 ಗುಂಟೆ ಜಮೀನು ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿ. ನಾನು ಪ್ರಸ್ತುತ ದಾವೆಯನ್ನು ಸದರಿ ಮನೆಯ ಬಗ್ಗೆ ಹೇಳಿರುವುದಿಲ್ಲ, ಸಾಕ್ಷಿ ಮುಂದುವರೆದು ನಾನು ಜಮೀನಿನಲ್ಲಿ ಮಾತ್ರ ಭಾಗ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ನಮ್ಮ ತಂದೆಗೆ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ದಾವಾ ಆಸ್ತಿಗಳು ಮತ್ತು ಇತರೆ ಸ್ವತ್ತುಗಳಲ್ಲಿ ನಮ್ಮ ತಂದೆಯವರು ಯಾವುದೇ ಭಾಗವನ್ನು ನೀಡಿರುವುದಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.